ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1835/2022 .

ಪ್ರಾ.ಸಾ. : 4

ಚಾ.ಸಾ. : 10

| | | |
|---|---|---|
| ಹೆಸರು | : | ಹೆಚ್. ಆರ್. ಸತ್ಯಪ್ರಕಾಶ್ |
| ತಂದೆಯ ಹೆಸರು | : | ಹೆಚ್. ಎನ್. ರಾಧಕೃಷ್ಣನ್ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಿಳಾಸ | : | ವಿರಾಜಪೇಟೆ |

... ........................................................................................................ ...

ದಿನಾಂಕ 05 ನೇ ಏಪ್ರಿಲ್ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಸ ಸ ಅ ರವರಿಂದ : -

1. ನಾನು ದಿ. 04.06.2021 ರಿಂದ ಇಲ್ಲಿಯ ವರೆಗೆ ಅಬಕಾರಿ ನಿರೀಕ್ಷಕರು ವಿರಾಜಪೇಟೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 21.12.2021 ರಂದು ಚಾಸಾ 1 ರವರಿಂದ ಕಡತವನ್ನು ಪಡೆದುಕೊಂಡು ಮುಂದಿನ ತನಿಖೆಯನ್ನು ಮುಂದುವರೆಸಿ, ಕೃತ್ಯಕ್ಕೆ ಉಪಯೋಗಿಸಿದ ವಾಹನ ಸಂಖ್ಯೆ ಕೆ. ಎ. 20. ಇಡಿ. 2878 ಕ್ಕೆ ಸಂಬಂಧಿಸಿದಂತೆ B - Extract ಅನ್ನು ಕೋರಿ ಉಡುಪಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ದಿ. 22.12.2021 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಮಹಜರ್ ಸಾಕ್ಷಿಗಳಾದಿ ಚಾಸಾ 2 ರಿಂದ 7 ಮತ್ತು 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

3. ದಿ. 24.12.2021 ರಂದು ಮಾನ್ಯ ಘನ ನ್ಯಾಯಾಲಯಕ್ಕೆ Remand ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಂತರ ದಿ. 07.02.2022 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಚಾಸಾ 5 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ. 14.02.2022 ರಂದು ಆರೋಪಿ ವಾಸ ಸ್ಥಳದ ಬಗ್ಗೆ

ಮಾಹಿತಿ ನೀಡುವಂತೆ ಪಿ. ಡಿ. ಓ ರವರಿಗೆ ಮನವಿ ಸಲ್ಲಿಸಿರುತ್ತೇನೆ. ನಂತರ ದಿ. 04.03.2022 ರಂದು ಆರಕ್ಷಕ ವೃತ್ತ ನಿರೀಕ್ಷಕರು ಪಿರಿಯಾಪಟ್ಟಣದವರಿಗೆ ಆರೋಪಿ ವಿರುದ್ಧ ಬೇರೆ ಯಾವುದೇ ಪ್ರಕರಣಗಳು ದಾಖಲಾಗಿವೆಯಾಗಿವೆ ಎಂಬ ಬಗ್ಗೆ ಕೋರಿ ಪತ್ರ ಬರೆಯಲಾಯಿತು. ದಿ. 17.03.2022 ರಂದು B extract ದಾಖಲೆಯಲ್ಲಿ ನಮೂದಾಗಿರುವ ವಾಹನದ ಮಾಲೀಕರಿಗೆ ಅಬಕಾರಿ ನೋಟೀಸ್ ಅನ್ನು ನೀಡಿ ಕೃತ್ಯಕ್ಕೆ ಸಂಬಂಧಿಸಿದಂತೆ ಸಮಜಾಯಿಷಿಯನ್ನು ಕೋರಲಾಗಿದೆ. ದಿ. 31.03.2022 ರಂದು ವಾಹನ ಮಾಲೀಕರಿಂದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿ. 20.05.2022 ರಂದು ಪಂಚಾಯಿತಿ ಅಧಿಕಾರಿಗಳು ಪಂಚವಳ್ಳಿ ಗ್ರಾಮ ಪಂಚಾಯಿತಿರವರು ನೀಡಲಾದ ವರದಿಯನ್ನು ಪಡೆದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿ. 31.05.2022 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗೆ ತೆಗೆದು ಉಳಿದ ಗಾಂಜಾವನ್ನು ಮಡಿಕೇರಿ ಅಬಕಾರಿ ಉಪಆಯುಕ್ತರ ಸಂರಕ್ಷಿತ ಕೊಠಡಿಗೆ ನೀಡಿ ಸ್ವೀಕೃತಿ ಪಡೆದಿರುತ್ತೇನೆ. ನಂತರ ದಿ. 22.08.2022 ರಂದು ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ವಾಹನದ ನಂಬರ್ ಪ್ಲೇಟ್ ಅನ್ನು ಬದಲಾಯಿಸುವ ಬಗ್ಗೆ ಆರೋಪಿಯ ವಿರುದ್ಧ ಗೋಣಿಕೊಪ್ಪ ಪೊ. ಠಾಣೆಗೆ ದೂರು ಸಲ್ಲಿಸಿ ಪ್ರ.ವ. ವರದಿಯನ್ನು ಪಡೆಯಲಾಯಿತು. ದಿ. 12.09.2022 ರಂದು ಆರೋಪಿ ವಿರುದ್ಧ ಆರೋಪ ಸಾಬೀತಾದ ಕಾರಣ ಅಂತಿಮವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಆರೋಪಿ ಈ ದಿನ ಗೈರು ಹಾಜರಾಗಿದ್ದು ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕಾರಾರು ಇಲ್ಲ ಎಂದು ತಿಳಿಸಿರುತ್ತಾರೆ.

5. ಸಾಕ್ಷಿಯು B - Extract ವರದಿ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 18 ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 19 ಎಂದು ಗುರುತಿಸಲಾಯಿತು. ಸಾಕ್ಷಿಯು ಆರಕ್ಷಕ ವೃತ್ತ ನಿರೀಕ್ಷಕರು ಪಿರಿಯಾಪಟ್ಟಣ ರವರು ನೀಡಿರುವ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ. 20 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ. ಪಿ. 20 (ಎ) ಎಂದು

ಗುರುತಿಸಲಾಯಿತು. ಸದರಿ ಮನವಿ ಪತ್ರಕ್ಕೆ ನೀಡಿರುವ ಉತ್ತರವನ್ನು ನಿ ಪಿ. 21 ಎಂದು ಗುರುತಿಸಲಾಯಿತು. ಪಿ. ಡಿ. ಓ ರವರು ನೀಡಿರುವ ಮನವಿ ಪತ್ರವನ್ನು ನಿ ಪಿ. 22 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ. ಪಿ. 22 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಿ. ಡಿ. ಓ ರವರು ನೀಡಿರುವ ದೃಢಿಕರಣ ಪತ್ರವನ್ನು ನೋಡಿ ಗುರುತಿಸಿದ್ದು ನಿ ಪಿ. 23 ಎಂದು ಗುರುತಿಸಲಾಯಿತು. ದಿ. 31.05.2022 ರ ಸ್ವೀಕೃತಿಯನ್ನು ನಿ. ಪಿ. 24 ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಮಾಲೀಕರಿಗೆ ನೀಡಿರುವ ನೋಟೀಸಿನ ಪ್ರತಿಯನ್ನು ನೋಡಿ ಗುರುತಿಸಿದ್ದು ನಿ. ಪಿ. 25 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ. ಪಿ. 25 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಮಾಲೀಕರ ಹೇಳಿಕೆ ನೋಟೀಸ್‌ನ ಪ್ರತಿಯನ್ನು ನೋಡಿ ಗುರುತಿಸಿದ್ದು ನಿ. ಪಿ. 26 ಎಂದು ಗುರುತಿಸಲಾಯಿತು. ಆರೋಪಿಯು ವಾಹನದ ಸಂಖ್ಯೆಯ ಪ್ಲೇಟ್ ಬದಲಾಯಿಸಿದ್ದಕ್ಕಾಗಿ ಗೋಣಿಕೊಪ್ಪ ಪೊ. ಠಾಣೆಗೆ ನೀಡಿರುವ ದೂರಿನ ನಕಲನ್ನು ನಿ. ಪಿ. 27 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂದಿಸಿದಂತೆ ಪ್ರ. ವ. ವರದಿಯನ್ನು ನಿ. ಪಿ. 28 ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪರೀಕ್ಷೆಗೆ ಕಳುಹಿಸಿ ವಾಪಸ್ ಪಡೆದಿರುವ ಮಾಧಕ ಪದಾರ್ಥವನ್ನು ನೋಡಿ ಗುರುತಿಸಿದ್ದನ್ನು ಮು. ಮಾ 1 ಮತ್ತು 2 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಃ ಮುಕ್ತಾಯ.

ಪಾಟೀ ಸವಾಲು :- ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಲಾಗಿ ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)